**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ- 6040/2022**
**ಚಾಸಾ - 01 / ಫ್ರಾಸಾ - 01**

| | |
|---|---|
| ಹೆಸರು | **ಲತಬಾಯಿ** |
| ಗಂಡನ ಹೆಸರು | **ಮುನೇಂದ್ರರಾವ್** |
| ವಯಸ್ಸು | **34** |
| ಉದ್ಯೋಗ | **ಕೂಲಿ ಕೆಲಸ** |
| ವಿಳಾಸ | **ತಾವರೆಕರೆ** |

**ದಿನಾಂಕಃ 29-02-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:**- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** -

1. ಆರೋಪಿಯು ನನ್ನ ಗಂಡ. ರಾಜಾರಾವ್ ರವರು ನನ್ನ ಗಂಡನ ಅಣ್ಣ. ಸುರೇಶ್ ರವರು ನನ್ನ ಮೈದುನ. ದಿನಾಂಕಃ 20-03-2006 ರಂದು ಕುರುಬರಹಳ್ಳಿ ಗ್ರಾಮದ ಪಂಚನಾಗೇಂದ್ರ ಸ್ವಾಮಿ ದೇವಸ್ಥಾನದಲ್ಲಿ ನನ್ನ ಮತ್ತು ಆರೋಪಿಯ ಮದುವೆ ಆಯಿತು. ಮದುವೆ ಆದಾಗಿನಿಂದಲು ಆರೋಪಿ ಮತ್ತು ಅವರ ಅಣ್ಣ ತಮ್ಮಂದಿರು ವರದಕ್ಷಿಣೆಗೊಸ್ಕರ ನನಗೆ ಮಾನಸಿಕ ಮತ್ತು ದೈಹಿಕವಾಗಿ ಕಿರುಕುಳವನ್ನು ನೀಡುತ್ತಿದ್ದರು. ನನಗೆ 16 ವರ್ಷದ ಪ್ರಿಯ ಎಂಬ ಒಬ್ಬ ಮಗಳಿದ್ದಾಳೆ. ದಿಃ 16-01-2022 ರಂದು ನಮ್ಮ ಮನೆಯಲ್ಲಿ ಜಗಳ ಆಯಿತು ಮತ್ತು ಆರೋಪಿಯು ನನ್ನನ್ನು ಮತ್ತು ನನ್ನ ಮಗಳನ್ನು ಬ್ಯಾಡರಹಳ್ಳಿಯ ರಸ್ತೆಯಲ್ಲಿ ಇಳಿಸಿ ಮನೆಗೆ ಪುನಃ ಬಂದರೆ ಕೊಲೆ ಮಾಡುವುದಾಗಿ ಬೆದರಿಕೆಯನ್ನು ಹಾಕಿದರು. ನನಗೆ ಬೇರೆ ಎಲ್ಲೂ ಜಾಗ ಇಲ್ಲದ ಕಾರಣ ನನ್ನ ಅಕ್ಕನ ಮನೆಗೆ ಹೋದೆನು.

2. ದಿಃ 04-08-2022 ರಂದು ನಾನು ಮನೆಯ ಹತ್ತಿರ ಬಂದು ನೋಡಿದಾಗ ಆರೋಪಿಯು ಬೇರೆ ಹೆಂಗಸಿನ ಜೊತೆ ಸಂಸಾರವನ್ನು ಮಾಡುತ್ತಿದ್ದರು. ಸದರಿ ವಿಷಯದ ಬಗ್ಗೆ ಅಕ್ಕ ಪಕ್ಕದವರಲ್ಲಿ ವಿಚಾರಿಸಿದಾಗ ಆರೋಪಿಯು 2 ನೇ ಮದುವೆ ಮಾಡಿಕೊಂಡು 6 ತಿಂಗಳುಗಳು ಕಳೆದಿದೆ ಎಂದು ತಿಳಿಸಿದರು. ನಂತರ ನಾನು ದಿಃ06-08-2022 ರಂದು ತಾವರೆಕೆರೆ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದೇನು.

3. ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ಸಂಜೆ 4.00 ಗಂಟೆಯ ಸಮಯದಲ್ಲಿ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಸಂಜೆ 5.00 ರಿಂದ 5.30 ರ ಸಮಯದಲ್ಲಿ ಪೋಲೀಸರು ಸ್ಥಳಕ್ಕೆ ಪಂಚನಾಮೆಯನ್ನು ಮಾಡಿದರು. ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-2 ಎಂದು ಸಾಕಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಚಾಸಾ-4 ರವರು ಬಂದು ಪಂಚನಾಮೆಯನ್ನು ಮಾಡಿ ನನ್ನ, ಚಾಸಾ-2 ಮತ್ತು 3 ರವರ ಪೋಟೋವನ್ನು ತೆಗೆದರು.

4. ಚಾಸಾ-4 ರವರು ನನಗೆ ನನ್ನ ಮದುವೆ ಪೋಟೋಗಳನ್ನು ಪೋಲೀಸ್ ಠಾಣೆಗೆ ನೀಡಲು ನೋಟೀಸನ್ನು ನೀಡಿದರು. ಈಗ ಸಾಕ್ಷಿಗೆ ದಿಃ 06-08-2022 ರ ನೋಟೀಸನ್ನು ತೋರಿಸಿದ್ದು, ಅದರಂತೆ ಚಾಸಾ-4 ರವರು ನನಗೆ ನನ್ನ ಮದುವೆ ಪೋಟೋವನ್ನು ಠಾಣೆಗೆ ಹಾಜರುಪಡಿಸುವಂತೆ

ತಿಳಿಸಿದ್ದರು. ನೋಟೀಸನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ದಿಃ 08-09-2022 ರ ನೋಟೀಸನ್ನು ತೋರಿಸಿದ್ದು, ಅದರಂತೆ ಪೋಲೀಸರು ಸಾಕ್ಷಿದಾರರ ಮಾಹಿತಿಯನ್ನು ನೀಡಲು ನನಗೆ ತಿಳಿಸಿದ್ದರು. ನೋಟೀಸನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿದ್ದು, ಅದು ನನ್ನ ನನ್ನ ಮದುವೆಯ ಪೋಟೋವಾಗಿದೆ. ಪೋಟೋವನ್ನು ನಿಪಿ-5 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಲಗ್ನಪತ್ರಿಕೆಯನ್ನು ತೋರಿಸಿದ್ದು, ಅದು ನನ್ನ ಮತ್ತು ಆರೋಪಿಯ ಮದುವೆಯ ಲಗ್ನಪತ್ರಿಕೆಯಾಗಿದೆ. ಸದರಿ ದಾಖಲೆಯು ನಕಲು ಪ್ರತಿಯಾದ ಕಾರಣದಿಂದ ನಿಶಾನೆಯಾಗಿ ಗುರುತಿಸಿರುವುದಿಲ್ಲ. ನಂತರ ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ನೀವು, ನಿಮ್ಮ ಮಗಳು ಮತ್ತು ಆರೋಪಿಯು 16 ವರ್ಷಗಳ ಕಾಲ ಜೊತೆಯಲ್ಲಿ ವಾಸಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಮದುವೆ ಆದ ದಿನದಿಂದಲೂ ಸಹ ಆರೋಪಿಯು ನಿಮಗೆ ತವರು ಮನೆಯಿಂದ ವರದಕ್ಷಿಣೆಯನ್ನು ತರುವಂತೆ ಹೇಳಿ ಕಿರುಕುಳವನ್ನು ನೀಡುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿಃ16-01-2022 ರಂದು ರಾತ್ರಿ 8.00 ಗಂಟೆಯ ಸಮಯದಲ್ಲಿ ಆರೋಪಿಯು ನಿಮ್ಮನ್ನು

ಮತ್ತು ನಿಮ್ಮ ಮಗಳನ್ನು ಬ್ಯಾಡರಹಳ್ಳಿಯ ನಡುರಸ್ತೆಯಲ್ಲಿ ಇಳಿಸಿ ನೀವು ಮತ್ತು ನಿಮ್ಮ ಮಗಳು ಮನೆಗೆ ಬಂದರೆ ಕೊಲೆ ಮಾಡುತ್ತೇನೆ ಎಂದು ಹೇಳಿ ಬೆದರಿಕೆಯನ್ನು ಹಾಕಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆಗಾಗಿ ನೀವು ಮತ್ತು ನಿಮ್ಮ ಮಗಳು ಭಯಪಟ್ಟು ನಿಮ್ಮ ಅಕ್ಕನ ಮನೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿಃ 06-08-2022 ರಂದು ನೀವು ಆರೋಪಿ ಮತ್ತು ಅವರ ಅಣ್ಣ ತಮ್ಮಂದಿರ ವಿರುದ್ಧ ತಾವರೆಕೆರೆ ಪೋಲೀಸ್ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳಕ್ಕೆ ಸಂಬಂದಿಸಿದಂತೆ ದೂರನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿಃ 08-09-2022 ರಂದು ಆರೋಪಿಯ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುವಂತೆ ಕೋರಿ ನೀವು ಚಾಸಾ-4 ರವರಿಗೆ ನಿಮ್ಮ ಮರು ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಯ ಪರ ಶ್ರೀ. ಸಿ.ಎನ್ , ವಕೀಲರಿಂದಃ-**

1.ನಿಮ್ಮ ತಂದೆ ತಾಯಿ ಬಡವರಾದ ಕಾರಣ ಮದುವೆಯನ್ನು ಮಾಡಲು ಹಣ ಇರುವುದಿಲ್ಲ, ಆಗಾಗಿ ನಿಮ್ಮ ಮತ್ತು ಆರೋಪಿಯ ಮದುವೆಯನ್ನು ದೇವಸ್ಥಾನದಲ್ಲಿ ಸರಳವಾಗಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಾನು ಮದುವೆ ಆದ ನಂತರ ಆರೋಪಿಯು ನನಗೆ ಕಿರುಕುಳನವನ್ನು ಕೊಡುತ್ತಿದ್ದರು ಎಂದು ಹೇಳಿ ಯಾವುದೇ ದೂರನ್ನು ನೀಡಿರುವುದಿಲ್ಲ, ನನ್ನ ತಂದೆ ತಾಯಿ ಇವತ್ತಲ್ಲ ನಾಳೆ ಸರಿಹೋಗುತ್ತದೆ ಎಂದು ಹೇಳುತ್ತಿದ್ದರು, ಆಗಾಗಿ ನಾನು ದೂರನ್ನು ನೀಡಿರುವುದಿಲ್ಲ, ಆದರೆ 2020 ನೇ ಇಸವಿಯಲ್ಲಿ ಆರೋಪಿಯ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆ. ನಾನು 2020 ನೇ ಇಸವಿಯಲ್ಲಿ ಆರೋಪಿಯ ವಿರುದ್ಧ ಸಲ್ಲಿಸಿರುವ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರವುದಿಲ್ಲ.

2. ನನ್ನ ಮದುವೆಯಾಗಿ 16 ವರ್ಷ ಆಗಿದೆ. ನೀವು ಆರೋಪಿಯ ಜೊತೆ ಜೀವನವನ್ನು ಮಾಡುತ್ತಿದ್ದಾಗ ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯ ಆ ಸಮಯದಲ್ಲಿ ತಾನು ಬ್ಲೆಡ್ ಬ್ಯಾಂಕ್ ನಲ್ಲಿ ಹೌಸ್ ಕೀಪಿಂಗ್ ಕೆಲಸವನ್ನು ಮಾಡುತ್ತಿದ್ದೇನು ಎನ್ನುತ್ತಾರೆ. ನಾನು ಎಸ್.ಕೆ ವಾಲೆಂಟರಿ ಬ್ಲೆಡ್ ಬ್ಯಾಂಕ್ ನಲ್ಲಿ ಕೆಲಸವನ್ನು ವಾಡುತ್ತಿದ್ದೇನು. ನನ್ನ ಕೆಲಸ ಮತ್ತು ಸಂಬಂಳದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸುತ್ತೇನೆ. ನಾನು ನಿರಂತರವಾಗಿ ಬ್ಲೆಡ್ ಬ್ಯಾಂಕ್ ನಲ್ಲಿ ಕೆಲಸವನ್ನು ಮಾಡಿರುವುದಿಲ್ಲ. ನನ್ನ ಮಗಳು ತಾವರೆಕೆರೆ ವಿ.ಇ.ಎಸ್ ಕಾನ್ವೆಂಟ್ ನಲ್ಲಿ ವಿದ್ಯಾಭ್ಯಾಸವನ್ನು ಮಾಡಿದ್ದಳು. ಆರೋಪಿಯೇ ನಿಮ್ಮ ಮಗಳ ವಿದ್ಯಾಭ್ಯಾಸದ ಖರ್ಚನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಈಗ ನಾನು ಎಸ್.ಕೆ ವಾಲೆಂಟರಿ ಬ್ಲೆಡ್ ಬ್ಯಾಂಕ್ ನಲ್ಲಿ ಹೌಸ್ ಕೀಪಿಂಗ್ ಕೆಲಸವನ್ನು ಮಾಡುತ್ತಿದ್ದೇನೆ.

3. ನಾನು ಆರೋಪಿಯ ಅಣ್ಣ ಮತ್ತು ತಮ್ಮನ ವಿರುದ್ದ ವರದಕ್ಷಿಣೆ ಕಿರುಕುಳಕ್ಕೆ ಸಂಬಂಧಿಸಿದಂತೆ ಯಾವುದೇ ದೂರನ್ನು ನೀಡಿರುವುದಿಲ್ಲ. ಆರೋಪಿಯು ನನ್ನನ್ನು ಮತ್ತು ನನ್ನ ಮಗಳನ್ನು ರಸ್ತೆ ಬಿಟ್ಟು ಹೋದ ತಕ್ಷಣ ಅವರ ವಿರುದ್ದ ದೂರನ್ನು ಸಲ್ಲಿಸಲು ನನಗೆ ಯಾವುದೇ ರೀತಿಯ ತೊಂದರೆ ಇರಲಿಲ್ಲ. ಆರೋಪಿಯು 2 ನೇ ಮದುವೆಯಾಗಿದ್ದಾರೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಿಃ 04-08-2022 ರಂದು ಪುನಃ ಜಗಳವಾದ ನಂತರ ಆರೋಪಿಯ ವಿರುದ್ದ ದೂರನ್ನು ಸಲ್ಲಿಸಿಲು ಏನಾದರೂ ತೊಂದರೆ ಇತ್ತ ಎಂದರೆ ಸಾಕ್ಷಿಯು ತನ್ನ ಮನೆಯವರ ಹತ್ತಿರ ಮಾತನಾಡಲು ಸಮಯ ಬೇಕಿತ್ತು ಎನ್ನುತ್ತಾರೆ.

4. ಈಗ ಸಾಕ್ಷಿಗೆ ನಿಪಿ-2 ನ್ನು ತೋರಿಸಿದ್ದು, ಅದರಲ್ಲಿರುವ ನಿಮ್ಮ ಸಹಿಯನ್ನು ಎಲ್ಲಿ ಮಾಡಿದ್ದೀರಾ ಎಂದರೆ ಸಾಕ್ಷಿಯು ತನ್ನ ಮನೆಯ ಹತ್ತಿರ ಸಹಿ ಮಾಡಿದ್ದೇನೆ ಎನ್ನುತ್ತಾರೆ. ನಿಪಿ-2 ನ್ನು ಚಾಸಾ-4 ರವರು ಬರೆದಿರುತ್ತಾರೆ. ಪಂಚನಾಮೆ ಮಾಡಿರುವ ಸ್ಥಳದ ಚಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ ರಸ್ತೆ ಮತ್ತು ಪುಟ್ಟಪ್ಪನವರ ಮನೆ, ಪಶ್ಚಿಮಕ್ಕೆ ಶಿವರಾಮಣ್ಣನವರ ಮನೆ, ಉತ್ತರಕ್ಕೆ ಖಾಲಿ ನಿವೇಶನ ಮತ್ತು ದಕ್ಷಿಣಕ್ಕೆ ರೇವಣ್ಣನವರ ಜಮೀನು ಇದೆ. ಆರೋಪಿಯು ನಿಮ್ಮ ವಿರುದ್ಧ ಕೌಟುಂಬಿಕ ನ್ಯಾಯಾಯದಲ್ಲಿ ಎಂ.ಸಿ.ಸಂಖ್ಯೆಃ 6249/2022 ರಂತೆ ವಿಚ್ಛೇಧನವನ್ನು ಕೋರಿ ಪ್ರಕರಣವನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಪ್ರಕರಣದಲ್ಲಿ ನೀವು ನ್ಯಾಯಾಲಯಕ್ಕೆ ಹಾಜರಾಗುತ್ತಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಾನು ಆರೋಪಿಯ ಜೊತೆ ಜೀವನವನ್ನು ಮಾಡಬೇಕು ಎಂದು ಕೋರಿ ನ್ಯಾಯಾಲಯದಲ್ಲಿ ಯಾವುದೇ ಪ್ರಕರಣವನ್ನು ಸಲ್ಲಿಸಿರುವುದಿಲ್ಲ. ಬೆಂಗಳೂರಿನ ನ್ಯಾಯಾಲಯದಲ್ಲಿ ನೀವು ಸಿ.ಮಿಸ್ ಸಂಖ್ಯೇಃ 86/2022 ರಂತೆ ಜೀವನಾಂಶವನ್ನು ಕೋರಿ ಪ್ರಕರಣವನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಪ್ರಕರಣದಲ್ಲಿ ನೀವು ಕೆಲಸವನ್ನು ಈಗ ಮತ್ತು ಈ ಹಿಂದೆ ಮಾಡಿರುವ ಬಗ್ಗೆ ತಿಳಿಸಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

5. ಚಾಸಾ-2 ಮತ್ತು 3 ರವರು ನಿಮ್ಮ ಮನೆಯ ಅಕ್ಕ ಪಕ್ಕದವರು ಅಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮ್ಮ ಮನೆಯ ಅಕ್ಕ ಪಕ್ಕದಲ್ಲಿ ಸುಮಾರು ಮನೆಗಳು ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಾಸಾ-2 ಮತ್ತು 3 ರವರು ನನ್ನ ಪರಿಚಯಸ್ಥರು. ಚಾಸಾ-2 ರವರು ಸುಂಕದಕಟ್ಟೆ ಯವರು ಮತ್ತು ಅವರು ಗೃಹಿಣಿಯಾಗಿರುತ್ತಾರೆ. ಚಾಸಾ-3 ರವರು ಚಾಸಾ-2 ರವರ ತಮ್ಮನಾಗುತ್ತಾರೆ. ಚಾಸಾ-2 ಮತ್ತು 3 ರವರು ಪೋಲಿಸ್ ಠಾಣೆಗೆ

ಹೋದಾಗ ನನ್ನ ಜೊತೆಯಲ್ಲಿಯೇ ಇದ್ದರು ಮತ್ತು ಅವರನ್ನು ನಾನೇ ಕರೆದುಕೊಂಡು ಹೋಗಿರುತ್ತೇನೆ. ನೀವು ನಿಮ್ಮ ಮನೆಯಿಂದ ಎಲ್ಲಾ ವಸ್ತುವನ್ನು ಮನೆ ಬಿಟ್ಟು ಹೋಗುವ ಸಮಯದಲ್ಲಿ ತೆಗೆದುಕೊಂಡು ಹೋಗಿರುತ್ತೀರಾ ಎಂದು ಹೇಳಿ ಆರೋಪಿಯು ನಿಮ್ಮ ವಿರುದ್ಧ ತಾವರೆಕೆರೆ ಪೋಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಪ್ರಕರಣದಲ್ಲಿ ನೀವು ಮತ್ತು ನಿಮ್ಮ ತಮ್ಮನಾದ ವೇಣುಗೊಪಾಲ್ (ಅನ್ವಿತಾ) ರವರು ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

6. ನೀವು ಸಿ.ಸಿ. 8160/2022 ರಂತೆ ಚಕ್ ಬೌನ್ಸ್ ಪ್ರಕರಣವನ್ನು ಆರೋಪಿಯ ಸ್ನೇಹಿತರಾದ ಮಹೇಶ್ ರವರ ವಿರುದ್ಧ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಚಕ್ಕನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣವನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನನ್ನ ತಮ್ಮ ಆರೋಪಿಯ ವಿರುದ್ಧ ಚಕ್ ಬೌನ್ಸ್ ಪ್ರಕರಣವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದ ಸಂಖ್ಯೇ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ತಮ್ಮ ಸಲ್ಲಿಸಿರುವ ಚಕ್ ಬೌನ್ಸ್ ಪ್ರಕರಣಗಳಿಗೆ ನಾಗರಾಜುರವರು ವಕೀಲರಾಗಿರುತ್ತಾರೆ. ಆರೋಪಿಯು ನಿಮಗೆ ವರದಕ್ಷಿಣೆಯನ್ನು ತರುವಂತೆ ಕಿರುಕುಳವನ್ನು ನೀಡಿದ್ದರೂ ಎಂದು ತೋರಿಸಲು ನೀವು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ದೂರನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ನೀಡಿಲ್ಲ ಎನ್ನುತ್ತಾರೆ. ಆರೋಪಿಯುನಿಮಗೆ ಮಾನಸಿಕ ಮತ್ತು ದೈಹಿಕವಾಗಿ ಹಲ್ಲೆಯನ್ನು ಮಾಡಿದ್ದಾರೆ ಎಂದು ತೋರಿಸಲು ನೀವು ನ್ಯಾಯಲಾಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮಗೆ ಆರೋಪಿಯ ಜೊತೆ

ಸಂಸಾರವನ್ನು ಮಾಡಬೇಕು ಉದ್ದೇಶ ಇಲ್ಲದೇ ಇರುವ ಕಾರಣ ನೀವಾಗೇ ಮನೆಯನ್ನು ಬಿಟ್ಟು ಹೋಗಿರುತ್ತೀರಾ ಮತ್ತು ಆರೋಪಿಗೆ ತೊಂದರೆಯನ್ನು ಕೊಡಬೇಕು ಎಂಬ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

7. ಆರೋಪಿಯ ಅಣ್ಣ ಮತ್ತು ತಮ್ಮ ಅವರ ಸಂಸಾರದ ಜೊತೆಯಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿದ್ದಿರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-1 ರಲ್ಲಿ ನೀವು ಯಾವ ಕಾರಣಕ್ಕಾಗಿ ತಡವಾಗಿ ದೂರನ್ನು ನೀಡಿರುತ್ತೀರಾ ಎಂದು ಹೇಳಿ ಯಾವುದೇ ವಿವರವನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿಯು ಆಟೋ ಚಾಲಕನಾಗಿ ಕೆಲಸವನ್ನು ಮಾಡುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿಯು ಬೆಳಗ್ಗೆ 7.00 ಗಂಟೆಗೆ ಮನೆಯನ್ನು ಬಿಟ್ಟು ಸಂಜೆ 6.00 ಗಂಟೆಯ ಸಮಯದಲ್ಲಿ ಕೆಲಸವನ್ನು ಮೂಗಿಸಿ ಮನಗೆ ಬರುತ್ತಿದ್ದರು ಸಾಕ್ಷಿಯು ಮುಂದುವರಿದು ಆರೋಪಿಯು ನಿಖರವಾದ ಸಮಯದಲ್ಲಿ ಮನೆಗೆ ಬರಲು ಆಗುತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಆರೋಪಿಗೆ ಕೆಲಸದ ಒತ್ತಡ ಇರುವ ಕಾರಣ ನಿಮ್ಮ ಮೇಲೆ ದೌರ್ಜನ್ಯವನ್ನು ಮಾಡಲು ಸಮಯ ಇರಲಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ಸಂಸಾರದ ಪೂರ್ತಿ ಜವಾಬ್ದಾರಿಯನ್ನು ಆರೋಪಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**